ಮಿಕ್ಕಿದ್ದು ಕೋರ್ಟ್‌ನಲ್ಲಿ ನೋಡೋಣ."

"ಇದೇ ಸತ್ಯ... ಇದೇ ನಮ್ಮಿಬ್ಬರ ಹೇಳಿಕೆ... ಜೊತೆಯಾಗಿ ಕೇಳಿದರೂ ಇಷ್ಟೇ ಬೇರೆಬೇರೆಯಾಗಿ ಕೇಳಿದರೂ ಇಷ್ಟೇ."

"ನಿಮ್ಮಿಷ್ಟ..." ಎಂದ ಭೂಷಣ್.

"ನಮಗೆ ಲಾಯರ್ ಬಳಿ ಮಾತಾಡುವ ಅವಕಾಶ ಇದೆಯಲ್ಲಾ?"

"ಅದು ನಿಮ್ಮ ಹಕ್ಕು..."

ಎಂದ ಭೂಷಣ್ ಅಲ್ಲಿಂದೆದ್ದ.

★★★

ಲಾಯರ್ ಶ್ರೀರಂಗಾಚಾರ್ ಕೋರ್ಟ್ ಹಾಲ್ ಪ್ರವೇಶಿಸುತ್ತಿದ್ದಂತೆಯೇ ಇಡೀ ಹಾಲ್ ನಿಶ್ಯಬ್ದವಾಯಿತು. ಇಡೀ ಕೋರ್ಟ್ ಹಾಲನ್ನು ಒಮ್ಮೆ ಸುತ್ತಲೂ ತಿರುಗಿ ನೋಡಿದರು. ಅವರಿಗೆ ಆ ಕೋರ್ಟ್ ಹಾಲ್‌ನೊಂದಿಗೆ ಸುಮಾರು ನಲವತ್ತೈದು ವರ್ಷಗಳ ಒಡನಾಟವಿತ್ತು. ಅದೆಷ್ಟೋ ಕೇಸ್‌ಗಳ ವಾದ ಪ್ರತಿವಾದಗಳು, ತೀರ್ಪುಗಳು, ಗೆದ್ದ ಕೇಸ್‌ಗಳು ಎಲ್ಲವೂ ಒಮ್ಮೆಲೇ ನೆನಪಾದವು. ಅದು, ಅವರ ಕಡೆಯ ಕೇಸ್. ವಕೀಲಿಕೆ ಸಾಕು ಎಂದು ಎಲ್ಲ ತ್ಯಜಿಸಿ ಹರಿದ್ವಾರದಲ್ಲಿ ವಾಸಮಾಡಬೇಕೆಂದು ನಿರ್ಧಾರ ಮಾಡಿಯಾಗಿತ್ತು. ಸುನಂದಾಳ ಕಣ್ಣೀರು, ಅಸಹಾಯಕತೆ ಅವರನ್ನು ಕಡೆಯಬಾರಿಗೆ ಕೋರ್ಟ್‌ಗೆ ಬರುವಂತೆ ಮಾಡಿತ್ತು. ಅಲ್ಲಿಯವರೆಗೂ ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ಸೋಲದ ಅವರಿಗೆ ಈ ಕಡೆಯ ಕೇಸ್ ದೊಡ್ಡ ಸವಾಲನ್ನೇ ಒಡ್ಡಿತ್ತು. ಅದಕ್ಕೇ ಆ ಕೇಸನ್ನು ತೆಗೆದುಕೊಂಡಿದ್ದರು. ಅದಕ್ಕಾಗಿಯೇ, ತಾವೇ ಪೊಲೀಸ್ ಸ್ಟೇಶನ್‌ಗೆ ಹೋಗಿ, ಮಹಜರ್ ಕಾಪಿ, ಪೋಸ್ಟ್‌ಮಾರ್ಟಂ ರಿಪೋರ್ಟ್, ಚಾರ್ಜ್‌ಶೀಟ್ ಎಲ್ಲಾ ತಂದಿದ್ದರು. ಆ ಇಳಿವಯಸ್ಸಿನಲ್ಲಿ ಅವರ ಉತ್ಸಾಹ ಕಂಡು ಬೆರಗಾದ ಭೂಷಣ್,

"ಸರ್, ಇದೊಂದು ಓಪನ್ ಅಂಡ್ ಷಟ್ ಕೇಸ್... ಕೊಲೆಗೆ ಬೇಕಾದ ಮೋಟಿವ್ ನವೀನ್ ಮತ್ತು ಅನುಪಮಾ ಅವರ ಸಂಬಂಧ ಮತ್ತು ಬ್ಲಾಕ್‌ಮೇಲ್. ಕೊಲೆ ಮಾಡಿರುವುದನ್ನು ಕಣ್ಣಾರೆ ನೋಡಿರುವ ಪ್ರತ್ಯಕ್ಷ ಸಾಕ್ಷಿ ಇದ್ದಾನೆ. ಅದಕ್ಕೆ ಪೂರಕವಾದ ಇನ್ನೆರಡು ಸಾಕ್ಷಿ ಇದೆ. ಈ ಕೇಸ್ ಕೈಗೆತ್ತಿಕೊಂಡು, ನಿಮ್ಮ ವೃತ್ತಿಜೀವನವನ್ನು ಸೋಲಿನೊಂದಿಗೆ ಮುಗಿಸುತ್ತೀರಾ?" ಎಂದು ಅಣಕವಾಡಿದ್ದ.

"ನೀವು ಬರೆದಿರೋ ರಿಪೋರ್ಟ್, ಚಾರ್ಜ್‌ಶೀಟ್ ಎಲ್ಲವೂ ಕೇವಲ, ನೀವು ನೋಡಿದ, ಕೇಳಿದ, ಕಂಡಿದ್ದ ವಿಷಯ ಅಷ್ಟೇ... ಆದರೆ ಅದೆಲ್ಲದರ ಹಿಂದೆ ಒಂದು ಕತೆ ಇರುತ್ತೆ... ಒಂದು ಸತ್ಯ ಇರುತ್ತದೆ. ಅದನ್ನು ಕಂಡುಹಿಡಿಯುವುದೇ ನಮ್ಮ ಕೆಲಸ. ಕೆಲವೊಮ್ಮೆ ಸಾಕ್ಷ್ಯಗಳು ಕೇಸನ್ನು ಕೈಗೆತ್ತಿಕೊಳ್ಳುವಂತೆ ಮಾಡಿದರೆ, ಕೆಲವೊಮ್ಮೆ ನಮ್ಮ ಗಟ್ ಫೀಲಿಂಗ್‌ನಿಂದ ಕೂಡಾ ಕೇಸ್ ತೆಗೆದುಕೊಳ್ಳುತ್ತೇವೆ. ಲಾಯರ್‌ಗಳು ತಮ್ಮ ಮುಂದಿರುವ ಸಾಕ್ಷ್ಯಗಳಿಂದ ಸತ್ಯ ಹುಡುಕಲ್ಲ. ಅದನ್ನೇ ಉಪಯೋಗಿಸಿಕೊಂಡು ನಮ್ಮ ಕ್ಲೈಂಟ್ ನಿರಪರಾಧಿ ಎಂದು ಸಾಬಿತು ಮಾಡಲು ಪ್ರಯತ್ನಿಸುತ್ತೇವೆ, ಅಷ್ಟೇ" ಎಂದು ತಿರುಗೇಟು ನೀಡಿದ್ದರು.

"ಸ್ಟೇಟ್ ವರ್ಸಸ್ ನವೀನ್ ಕುಮಾರ್..." ಎಂದು ಕೋರ್ಟ್ ಕ್ಲರ್ಕ್ ಕೂಗುತ್ತಿದ್ದಂತೆಯೇ ಇಡೀ ಹಾಲ್ ನಿಶ್ಯಬ್ದವಾಯಿತು. ಅಲ್ಲಿಯವರೆಗೂ ನಡೆದ ವಿಚಾರಣೆಗೆ ತಮ್ಮ ಮಗನನ್ನು ಕಳುಹಿಸಿ, ಈಗ ಕೇಸಿನ ಆರ್ಗ್ಯುಮೆಂಟ್ ಮತ್ತು ಪಾಟೀಸವಾಲಿಗೆ ಖುದ್ದು ಹಾಜರಾಗಿದ್ದರು.

"ಮೈಲಾರ್ಡ್..." ಅವರ ಕಂಚಿನ ಕಂಠ, ಅವರ ಗಾಂಭೀರ್ಯ, ಅವರ ನಡೆ ಎಲ್ಲವೂ ಅವರಲ್ಲಿದ್ದ ಜ್ಞಾನ ಸಂಪತ್ತನ್ನು ಎತ್ತಿ ತೋರಿಸುತ್ತಿದ್ದವು.